ಕುಳಿತುಕೊಳ್ಳುವಂತೆ ನಟಿಸಿ, ಕುಳಿತು ಕೊಳ್ಳಬೇಡಿ, ಜಾಗ್ರತೆ' ಎಂದ ಡ್ರೈವರ್.

ನನಗೂ ಮೋಜೆನಿಸಿತು. ಇವರೆಲ್ಲ ಹೇಳುವುದು ಸತ್ಯವೋ ನೋಡಿಯೇ ಬಿಡೋಣ ಎಂದು ಆ ಕುರ್ಚಿಯ ಬಳಿ ಸಾಗಿ ಕುಳಿತುಕೊಳ್ಳುವಂತೆ ಬಗ್ಗಿದೆ.

ಹಿಂದಿನಿಂದ ಛಂಗನೆ ಹಾರಿ ಬಂದ ಅಬ್ದುಲ್ಲ ನನಗಿಂತ ಮೊದಲೇ ಕುರ್ಚಿಯಲ್ಲಿ ಕುಳಿತುಕೊಂಡ. ನನಗೆ ಆಸನ ನೀಡದೆ ತಾನು ಕುಳಿತುಕೊಂಡದ್ದನ್ನು ಬೆಪ್ಪಾಗಿ ಸಮರ್ಥಿಸಿಕೊಳ್ಳುತ್ತ, 'ಇಲ್ಲಿ ಬೇರೆ ಕುರ್ಚಿಯಿಲ್ಲ. ಇದೊಂದು ಮುರಿದ ಕುರ್ಚಿ ಮಾತ್ರ. ಜಾಗ್ರತೆಯಾಗಿ ಕೂರಬೇಕು. ನನಗೇನೋ ಅಭ್ಯಾಸವಾಗಿದೆ' ಎಂದ!

'ನೀವೇ ನೋಡಿದಿರಲ್ಲ, ಅವನು ಆ ಕುರ್ಚಿಯಲ್ಲಿ ಯಾರನ್ನೂ ಕುಳಿತುಕೊಳ್ಳಲು ಬಿಡುವುದಿಲ್ಲ... ಅಪ್ಪಿತಪ್ಪಿ ಕುಳಿತರೆ ಮುಲಾಜಿಲ್ಲದೆ ಕೆಳಗೆಳೆದು ಹಾಕಿ ಕಾಲಿನಿಂದ ಒದ್ದು ತಾನು ಹೋಗಿ ಕುಳಿತುಕೊಳ್ಳುತ್ತಾನಂತೆ. ಅವನ ಪ್ರಕಾರ ಅದರಲ್ಲಿ ಇತರರು ಕುಳಿತುಕೊಳ್ಳುವುದು ಅಂದರೆ ಅದು ಆತನ ಸಿಂಹಾಸನದ ಮೇಲೆ ಆಕ್ರಮಣ... ಇಲ್ಲಿಯ ಒಂದಿಬ್ಬರು ಹುಡುಗರಿಗೆ ಆತನ ಒದೆತದ ರುಚಿ ಸಿಕ್ಕಿದೆಯಂತೆ' ಎಂದ ಡ್ರೈವರ್.

'ಇಲ್ಲಿಗೆ ಎರಡು ಕುರ್ಚಿ ಕಳುಹಿಸಿಕೊಡಬೇಕು, ನಿಮ್ಮಂಥವರು ಬರುವಾಗ ಬೇಕಾಗುತ್ತದೆ' ಆತ ಬಹುಕಾಲದ ಅಪೇಕ್ಷೆಯೆಂಬಂತೆ ನುಡಿದ. 'ಸಾಹುಕಾರರಲ್ಲಿ ಹೇಳಿ ನೋಡುತ್ತೇನೆ' ಎಂದೆ. 'ನನಗೆ ನೀವೇ ಸಾಹುಕಾರರು. ತಿಂಗಳಿಗೊಮ್ಮೆ ಹಣ ಹಂಚುವವರು... ನಾನು ಸಾಹುಕಾರರನ್ನು ನೋಡಿದ್ದು ಒಮ್ಮೆ ಮಾತ್ರ. ನೀವು ಹೇಳಿದರೆ ಅವರು ಬೇಡವೆನ್ನುವುದಿಲ್ಲ' ಅನ್ನುತ್ತ ಅಬ್ದುಲ್ಲ ಮುಗುಳ್ನಕ್ಕಿದ್ದ.

ನಾನು ಆ ಕೋಣೆಯಲ್ಲಿರುವವರೆಗೂ ತನ್ನ ಕುರ್ಚಿ ಬಿಟ್ಟೇಳದ ಅಬ್ದುಲ್ಲ ನಾನು ಅಲ್ಲಿಂದ ಹೊರಡುತ್ತಲೇ ಎದ್ದು ನನ್ನ ಹಿಂದೆಯೇ ಬಂದ. 'ಸಂಜೆ ಹೊತ್ತು ಆಚೀಚೆಯವರೆಲ್ಲ ಬರುತ್ತಾರೆ, ನಾವೆಲ್ಲ ಇಲ್ಲಿ ಕುಳಿತು ಮಾತಾಡುತ್ತ ವಿಶ್ರಾಂತಿ ಪಡೆಯುವುದು... ಅದಲ್ಲದೆ ಬೇರೇನು ಮಾಡಲು ಸಾಧ್ಯ ಇಲ್ಲಿ?' ನಕ್ಕು ನುಡಿದ ಅಬ್ದುಲ್ಲ.

'ಹಬ್ಬದ ದಿನಗಳಲ್ಲಿ ಅಬ್ದುಲ್ಲನ ವತಿಯಿಂದ ಇಲ್ಲಿಯವರಿಗೆಲ್ಲ ವಿಶೇಷ ಊಟ ಇದೆಯಂತೆ' ಡ್ರೈವರ್ ನನಗೆ ಹೇಳಿ ಅರಬಿಯಲ್ಲಿ ಅಬ್ದುಲ್ಲನಿಗೂ ವಿವರಿಸಿದ.

'ಅಷ್ಟೂ ಮಾಡದಿದ್ದರೆ ಹೇಗೆ! ನಮ್ಮಜ್ಜನ ಕಾಲದಲ್ಲಿ ಹಬ್ಬಗಳದು ಏನು ವೈಭವ ಇತ್ತು... ಊಟಕ್ಕೇ ನೂರಾರು ಮಂದಿ... ಒಬ್ಬೊಬ್ಬ ಮೊಮ್ಮಕ್ಕಳ ಕೈಗೂ ಚಿನ್ನದ ನಾಣ್ಯದ ಈದಿ... ಈಗ ನೋಡಿ, ಎಲ್ಲಿಗೆ ಬಂದಿದೆ...' ವಿಷಾದದೊಂದಿಗೆ ನುಡಿದಿದ್ದ ಅಬ್ದುಲ್ಲ.

★★★

ಅಬ್ದುಲ್ಲನ ವಂಶದ ಬಗ್ಗೆ ನನಗೂ ಸಹಜವಾಗಿ ಸ್ವಲ್ಪ ಆಸಕ್ತಿ ಹುಟ್ಟಿತ್ತು. ನಾನು ಹೋದಾಗಲೆಲ್ಲ ಆತನ ಮನೆತನದ ವೈಭವದ ಕತೆಗಳನ್ನು ಹೇಳಲು ಒತ್ತಾಯಿಸುತ್ತಿದ್ದೆ. 'ಅದೆಲ್ಲ ಯಾಕೆ!..' ಎಂದು ಜಾರಿಕೊಳ್ಳುತ್ತಿದ್ದ ಅಬ್ದುಲ್ಲ. ಒಂದು ಭೇಟಿಯಲ್ಲಿ ಈ ಬಾರಿ ನೀನು ಹೇಳದಿದ್ದರೆ ನಾನು ನಿನ್ನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತೇನೆ ಎಂದು ಧಮ್ಕಿ ಕೊಟ್ಟೆ. ಬೇರೆ ದಾರಿ ಕಾಣದೆ ಒಪ್ಪಿಕೊಂಡು ಕತೆ ಹೇಳಿದ್ದ. ಅವನು ಹೇಳಿದ್ದನ್ನು ಅರಿತುಕೊಂಡು ನಮ್ಮ ಡ್ರೈವರ್ ನನಗೆ ವಿವರಿಸಿದ್ದು ಹೀಗೆ...

'ಇದೇ ಸಿಂಹಾಸನದಲ್ಲಿ ಕೂತು ಅಜ್ಜ ಮಜ್ಲೀಸ್ ನಡೆಸುವುದನ್ನು ನಾನು ಕಂಡಿದ್ದೇನೆ. ಅದೇನು ವೈಭವ! ನಾವು ಮಕ್ಕಳೆಲ್ಲ ಅಲ್ಲಿಗೆ ಹೋಗುವಂತಿರಲಿಲ್ಲ... ಇಣುಕಿ ನೋಡುತ್ತಿದ್ದದ್ದು